2) **ರಾಜ್ಯದಲ್ಲಿ ವಿಶೇಷವಾಗಿ ಗ್ರಾಮಗಳು, ತಾಂಡಾ ಮತ್ತು ಕೇರಿಗಳಲ್ಲಿ ಇರುವ ಶಾಲೆಗಳನ್ನು ಪೂರ್ಣ ಪ್ರಾಥಮಿಕ ಶಾಲೆಗಳನ್ನಾಗಿ ಪರಿವರ್ತಿಸುವ ಬಗ್ಗೆ.**

ಶ್ರೀ ಮನೋಹರ ಐನಾಪುರ:- ಮಾನ್ಯ ಉಪಾಧ್ಯಕ್ಷರೆ, ಸುಮಾರು ನಾಲ್ಕೈದು ವಿಶೇಷಗಳಿಂದ ಹಲವಾರು ಗ್ರಾಮಗಳಲ್ಲಿ ವಿಶೇಷವಾಗಿ ಕೇರಿ ಹಾಗೂ ತಾಂಡಾಗಳಲ್ಲಿ ಪ್ರಾಥಮಿಕ ಶಾಲೆಗಳು ಕೇವಲ 4ನೇ ತರಗತಿಯವರೆಗೆ ಮಾತ್ರ ಇವೆ. ಅವುಗಳ ಸಂಖ್ಯೆಯಲ್ಲಿ ಹೆಚ್ಚಳವಿದ್ದರೂ 4ನೇ ತರಗತಿಯಿಂದ ಈ ಶಾಲೆಗಳನ್ನು ಪೂರ್ಣ ಪ್ರಾಥಮಿಕ ಶಾಲೆಗಳನ್ನಾಗಿ 7ನೇ ತರಗತಿಯವರೆಗೆ ಮುಂದುವರೆಸಿಲ್ಲ. ನೈಸರ್ಗಿಕ ಬೆಳವಣಿಗೆಗೆ ಆಧಾರದ ಮೇಲೆ ಇಂಥ ಶಾಲೆಗಳನ್ನು ಗುರುತಿಸಿ 7ನೇ ತರಗತಿಯವರೆಗೆ ಮಕ್ಕಳು ಅದೇ ಗ್ರಾಮದಲ್ಲಿದ್ದು ಶಿಕ್ಷಣ ಪಡೆಯುವ ಸೌಲಭ್ಯವನ್ನು ಕಲ್ಪಿಸಿಕೊಡುವ ಕಾರ್ಯ ಸರ್ಕಾರ ಮಾಡಬೇಕಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿ ಹಾಲಿ ಅನುಸರಿಸುತ್ತಿರುವ ನಿಯಮದಂತೆ 300 ಮತ್ತು ಅದಕ್ಕೂ ಹೆಚ್ಚು ಜನಸಂಖ್ಯೆಯುಳ್ಳ ಮತ್ತು ಹತ್ತಿರದ ಪ್ರಾಥಮಿಕ ಶಾಲೆಯು ಸದರಿ ವಸತಿ ಪ್ರದೇಶಕ್ಕೆ 1 ಕಿ.ಮೀ ದೂರಕ್ಕಿಂತ ಹೆಚ್ಚು ಇರದಂತೆ ನೋಡಿಕೊಂಡು ಪ್ರಾಥಮಿಕ ಶಾಲೆಗಳನ್ನು ಮಂಜೂರು ಮಾಡಲಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ ವಸತಿ ಪ್ರದೇಶದ ಜನಸಂಖ್ಯೆ 300 ಕ್ಕಿಂತ ಕಡಿಮೆ ಇದ್ದು ಸಾಕಷ್ಟು ಸಂಖ್ಯೆಯಲ್ಲಿ ಶಾಲೆಗೆ ಹೋಗುವ ನಯೋಮಿತಿಯ ಮಕ್ಕಳಿದ್ದಲ್ಲಿ ಪೂರ್ವಾಭಾವಿಯಾಗಿ ಹತ್ತಿರದ ಪ್ರಾಥಮಿಕ ಶಾಲೆಯಿಂದ ಒಬ್ಬ ಉಪಾಧ್ಯಾಯರನ್ನು ಈ ವಸತಿ ಪ್ರದೇಶಕ್ಕೆ ನಿಯೋಜಿಸಿ ಮುಖ್ಯ ಶಾಲೆಯ ಶಾಖಾ ಶಾಲೆಯಾಗಿ ಈ ಪ್ರದೇಶದಲ್ಲಿ ಶಾಲೆಯನ್ನು ತಾತ್ಕಾಲಿಕವಾಗಿ ಪ್ರಾರಂಭಿಸಲಾಗುವುದು. ಇವರ ಉದ್ದೇಶ ಮಕ್ಕಳು ಹತ್ತಿರದ ಮುಖ್ಯ ಶಾಲೆಗೆ ಹೋಗುವ ಬದಲು ಆ ಶಾಲೆಯ ಒಬ್ಬ ಶಿಕ್ಷಕರು ಮಕ್ಕಳಿಗುವಲ್ಲಿಗೆ ಬಂದು ಬೋಧಿಸುವುದಾಗಿರುತ್ತದೆ.

ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹೊಸದಾಗಿ ಶಿಕ್ಷಕರ ಹುದ್ದೆಗಳು ಮಂಜೂರಾದ ನಂತರ ಇಂತಹ ಶಾಖಾ ಶಾಲೆಗಳನ್ನು ಪೂರ್ಣ ಪ್ರಾಥಮಿಕ ಶಾಲೆಗಳಾಗಿ ಪರಿವರ್ತಿಸಲಾಗುವುದು. ಇಂತಹ ಶಾಲೆಗಳನ್ನು ಪೂರ್ಣ ಶಾಲೆಗಳಾಗಿ ಪರಿವರ್ತಿಸಲು ಮತ್ತು ಅಗತ್ಯವಿರುವ ಸ್ಥಳಗಳಲ್ಲಿ ಹೊಸದಾಗಿ ಪ್ರಾಥಮಿಕ ಶಾಲೆಗಳನ್ನು ಆರಂಭಿಸುವ ಸಲುವಾಗಿ ಸ್ಕೂಲ್ ಮ್ಯಾಪಿಂಗ್ ಸಮೀಕ್ಷೆಯನ್ನು ನಡೆಸಲಾಗುತ್ತಿದೆ.

- ಜೊತೆಗೆ ಈಗಾಗಲೇ ಸರ್ಕಾರಕ್ಕೆ 12,000 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಇದಕ್ಕೆ ಮುಜೂರಾತಿ ದೊರೆತ ನಂತರ ಈ ಶಾಲೆಗಳನ್ನು ಪೂರ್ಣ ಪ್ರಾಥಮಿಕ ಶಾಲೆಗಳಾಗಿ ಪರಿವರ್ತಿಸುವುದನ್ನು ಪರಿಶೀಲಿಸಲಾಗುವುದು.

3) **ಸರ್ಕಾರಿ ರೇಷ್ಮೆ ಕಾರ್ಖಾನೆಯಲ್ಲಿ ಕಿರಿಯ ಸಹಾಯಕರಾಗಿ ಮತ್ತು ಎಸ್.ಎಸ್.ಎಲ್.ಸಿ. ಆಗಿರುವ ಕಾರ್ಮಿಕರಿಗೆ ವೇತನ ಪರಿಷ್ಕರಣ.**

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಉಪಾಧ್ಯಕ್ಷರೆ, ಸರ್ಕಾರಿ ರೇಷ್ಮೆ ಕಾರ್ಖಾನೆಗಳಲ್ಲಿ ಕಾರ್ಮಿಕರಿಗೆ ಹುದ್ದೆಕಾರರಿಗೆ ನೇಕಾರರಿಗೆ ಅಲ್ಬಾ ಸ್ಪೆಂಡರ್ಸ್‌ಗೆ ಹಾಗೂ ಇತರ ಕೆಲಸಗಾರರಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ದ್ವಿತೀಯದರ್ಜೆ ಸಹಾಯಕರಾಗಿದ್ದು ಕೆಲಸ ನಿರ್ವಹಿಸುತ್ತಿರುವವರಿಗೆ ದಿನಾಂಕ 1-4-88ರಲ್ಲಿನ ಟ್ರೂಪ್ ಅಗ್ರಿಮೆಂಟ್ ಪ್ರಕಾರ ವೇತನ ಪರಿಷ್ಕರಣೆಯನ್ನು ನೀಡದಿರುವುದು ಕಾರ್ಮಿಕರಿಗೆ ತೀವ್ರ ನಿರಾಸೆಯಾಗಿದೆ. ಆದ್ದರಿಂದ ಈ ಕೂಡಲೇ ಅಂತಿಮವಾಗಿ ಅವರ ಕೋರಿಕೆಗಳನ್ನು ಪೂರೈಸಿ ಕಾರ್ಮಿಕ ವರ್ಗಕ್ಕೆ ಸಹಾಯ ಮಾಡಬೇಕಾಗಿ ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಮುನಿಯಪ್ಪ (ರೇಷ್ಮೆ ರಾಜ್ಯ ಮಂತ್ರಿಗಳು):- ಮಾನ್ಯ ಉಪಾಧ್ಯಕ್ಷರೆ, ಇಲಾಖೆಯ ಐದು ರೇಷ್ಮೆ ನೂಲು ಬಿಚ್ಚುವ ಘಟಕಗಳಲ್ಲಿ 42 ಮಂದಿ ಇತರೆ ಗುಮಾಸ್ತರು (ಕಿರಿಯ ಸಹಾಯಕರು) ಕೆಲಸ ಮಾಡುತ್ತಿದ್ದು ಇವರಿಗೆ ವೇತನ ಶ್ರೇಣಿ ರೂ. 780 - 1040 ಆಗಿರುತ್ತದೆ. ಇವಲ್ಲದೆ, 1980ನೇ ಇಸವಿಯಲ್ಲಿ ನಿರ್ದೇಶಕರು ಒಂದು "ಆನಾಮಲೀನ್ ಕಟ್ಟಿ" ಯನ್ನು ಸ್ಥಾಪಿಸಿ ಇಂತಹ ಕೆಲಸಗಾರರು ಕುಂದು ಕೊರತೆಗಳನ್ನು ವಿಚಾರಿಸಿ ವರದಿ ನೀಡಲು ಆದೇಶಿಸಿದ್ದರು. ವರದಿ ಪ್ರಕಾರ ಮೇಲೆ ಕಾಣಿಸಿದ ವೇತನ ಶ್ರೇಣಿಯಲ್ಲಿ 5 ವರ್ಷ ಸೇವೆ ಸಲ್ಲಿಸುವವರು ಹಾಗೂ ಎಸ್.ಎಸ್.ಎಲ್.ಸಿ.ಪಾಸ್ ಆಗಿರುವವರು ಇವರಿಗೆ ಹೆಚ್ಚಿನ ವೇತನ ಶ್ರೇಣಿ ಅಂದರೆ ರೂ.960 - 1760 ನ್ನು ನೀಡಲು ಶಿಫಾರಸ್ಸು ಮಾಡಲಾಗಿತ್ತು. ಇದರ ಪ್ರಕಾರ 19 ಇತರೆ ಕೆಲಸಗಾರರಿಗೆ ಈ ಸೌಲಭ್ಯವನ್ನು ಈಗಾಗಲೇ ನೀಡಲಾಗಿದೆ. ಉಳಿದ ಇತರೆ ಕೆಲಸಗಾರರಿಗೆ ಹೆಚ್ಚಿನ ವೇತನ ಶ್ರೇಣಿ ನೀಡಲು "ಕಾರ್ಮಿಕರ ಸಂಧಾನ" (1988-93)

ಇದರಲ್ಲಿ (ಬೇಡಿಕೆ 12) ಅಳವಡಿಸಿದ್ದು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು. ಸಂಧಾನದ ಹಲವಾರು ಬೇಡಿಕೆಗಳನ್ನು ಸರ್ಕಾರದ ಹಲವು ಹಂತಗಳಲ್ಲಿ ಚರ್ಚಿಸಿದ್ದಲ್ಲದೆ ಮಾನ್ಯ ರೇಷ್ಮೆ ಮಂತ್ರಿಗಳ ಅಧ್ಯಕ್ಷತೆಯಲ್ಲಿಯೂ ಸಹ ಚರ್ಚಿಸಲಾಯಿತು. ಈ ಸಭೆಯಲ್ಲಿ ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಟಿ.ಸಿ. ಜಯಚಂದ್ರ ಇವರು ಪಾಲ್ಗೊಂಡಿದ್ದರು.

ಸಂಧಾನದ ಹಲವಾರು ಬೇಡಿಕೆಗಳನ್ನು ಸರ್ಕಾರವು ಈಗಾಗಲೇ ಒಪ್ಪಿ ಆದೇಶಿಸಿದ್ದು, ಮೇಲ್ಕಂಡ ಇತರೆ ಕೆಲಸಗಾರರ ವೇತನ ಶ್ರೇಣಿಯ ಬಗ್ಗೆ ಸರ್ಕಾರದ ವಿವಿಧ ಇಲಾಖೆಗಳ ತೀವ್ರ ಪರಿಶೀಲನೆಯಲ್ಲಿದೆ.

4) **ರಾಜ್ಯದ ಕಾರಾಗೃಹದಲ್ಲಿ 10 ರಿಂದ 13 ವರ್ಷ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಖೈದಿಗಳನ್ನು ಡಾ|| ಅಂಬೇಡ್ಕರ್ ಜನ್ಮಶತಾಬ್ದಿಯಂದು ಮಾನವೀಯತೆ ದೃಷ್ಟಿಯಿಂದ ಬಿಡುಗಡೆ.**

ಶ್ರೀ ಎಚ್. ಎಂ. ರೇವಣ್ಣ (ಮಾಗಡಿ):- ಮಾನ್ಯ ಉಪಾಧ್ಯಕ್ಷರೇ, ರಾಜ್ಯದ ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಖೈದಿಗಳು ಈಗಾಗಲೇ 10 ರಿಂದ 13 ವರ್ಷಗಳನ್ನೂ ಕಾರಾಗೃಹಗಳಲ್ಲಿ ಒಳ್ಳೆಯ ನಡತೆಯಿಂದ ಪೂರೈಸಿರುವುದರಿಂದ ಈ ವರ್ಷ ಡಾ: ಬಿ.ಆರ್. ಅಂಬೇಡ್ಕರ್ ಅವರ ಜನ್ಮಶತಾಬ್ದಿಯನ್ನು ಆಚರಿಸುವುದರಿಂದ ಈ ಖೈದಿಗಳನ್ನು ಮಾನವೀಯತೆ ದೃಷ್ಟಿಯಿಂದ ಹಾಗೂ ಸಮಾಜದಲ್ಲಿ ಅವರ ಜೀವನವನ್ನು ಹಸನುಮಾಡಿಕೊಂಡು ಬಾಳಲು ಅವರುಗಳನ್ನು ಬಿಡುಗಡೆ ಮಾಡಬೇಕೆಂಬ ಸರ್ಕಾರವನ್ನು ಕೋರುತ್ತೇನೆ. ಇದರ ಜೊತೆಗೆ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಶಿಕ್ಷೆ ಅನುಭವಿಸುತ್ತಿರುವ ಖೈದಿಗಳ ಪಟ್ಟಿಯನ್ನೂ ಕಳುಹಿಸಿಕೊಟ್ಟಿರುತ್ತೇನೆ.

ಶ್ರೀ ಡಿ. ಕೆ. ಶಿವಕುಮಾರ್ (ಬಂಧಿಖಾನೆ ಮತ್ತು ಗೃಹ ರಕ್ಷಕ ದಳದ ರಾಜ್ಯ ಸಚಿವರು):- ಮಾನ್ಯ ಉಪಾಧ್ಯಕ್ಷೀಣಿಯವರೇ,

ದಿನಾಂಕ: 15-2-1992ರಂದು ರಾಜ್ಯದ ಕೇಂದ್ರ ಕಾರಾಗೃಹಗಳಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾದ ಖೈದಿಗಳು 10 ವರ್ಷದ ಮೇಲ್ಪಟ್ಟು ಜೈಲು ಶಿಕ್ಷೆಯನ್ನು ಅನುಭವಿಸುತ್ತಿರುವವರು 234 ಮಂದಿ ಇದ್ದಾರೆ. ಈ ಪೈಕಿ 228 ಪುರುಷ ಖೈದಿ ಮತ್ತು 6 ಮಹಿಳಾ ಖೈದಿಗಳು.

ದಿನಾಂಕ: 18-12-1978ರ ಹಿಂದೆ ಶಿಕ್ಷೆಯಾದ ಜೀವಾವಧಿ ಬಂಧಿಗಳನ್ನು ವಿಚಾರಣಾ ಅವಧಿಯು ಸೇರಿ 10 ವರ್ಷ ಸಜೆ ತೀರಿದ ನಂತರ ಅವರ ಒಳ್ಳೆಯ ನಡತೆ, ಪ್ರಾಮಾಣಿಕತೆ ಸುಧಾರಣಾ ಮನೋಭಾವನೆಗಳನ್ನು ಪರಿಗಣಿಸಿ ಹಾಗೂ ಸಲಹಾ ಮಂಡಳಿಯಿಂದ ಶಿಫಾರಸ್ಸಾಗಿ ಬಂದ ಬಂಧಿಗಳನ್ನು ಸರ್ಕಾರವು ಬಿಡುಗಡೆ ಮಾಡುತ್ತಿತ್ತು. ಆದರೆ ದಂಡ ಪ್ರಕ್ರಿಯೆ ಸಂಹಿತೆ 433(ಎ)ಗೆ ದಿನಾಂಕ: 18-12-1978ರಂದು ಕೇಂದ್ರ ಸರ್ಕಾರವು ತಿದ್ದುಪಡಿ ಮಾಡಿದ ನಂತರ, ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಬಂಧಿಗಳನ್ನು ವಿಚಾರಣಾ ಅವಧಿಯು ಸೇರಿ 14 ವರ್ಷ ಸಜೆ ತೀರಿದ ನಂತರ ಮಾತ್ರ ಬಿಡುಗಡೆಗೆ ಪರಿಶೀಲನೆ ಮಾಡಬೇಕಾಗುತ್ತದೆ. ಇತ್ತೀಚೆಗೆ ಡಾ: ಬಿ.ಆರ್. ಅಂಬೇಡ್ಕರ್ ಅವರ ಜನ್ಮ ಶತಾಬ್ದಿಯ ಅಂಗವಾಗಿ ರಾಜ್ಯ ಸರ್ಕಾರವು ದಿನಾಂಕ: 18-12-1978ರ ಹಿಂದೆ ಜೀವಾವಧಿ ಶಿಕ್ಷೆಗೆ ಒಳಗಾದ ಎಲ್ಲಾ ಹೆಣ್ಣೊಂದು ಬಂಧಿಗಳನ್ನು ಬಿಡುಗಡೆ ಮಾಡಲಾಗಿದೆ. ಇದಲ್ಲದೆ ಜೀವಾವಧಿ ಶಿಕ್ಷೆಗೆ ಒಳಗಾದ ವಿಚಾರಣಾ ಅವಧಿಯು ಸೇರಿ ೧೦ ವರ್ಷ ಸಜೆ ಮುಗಿಸಿದ ನಂತರ ಬಿಡುಗಡೆ ಮಾಡಲು ಅನುಕೂಲವಾಗುವಂತೆ ಸರ್ಕಾರವು ದಂಡ ಪ್ರಕ್ರಿಯೆ ಸಂಹಿತೆ 433(ಎ) ನಿಯಮಕ್ಕೆ ತಿದ್ದುಪಡಿ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದ್ದು, ಪ್ರಸ್ತುತ ಇದನ್ನು ಕಾನೂನು ಇಲಾಖೆಯ ಪರಿಶೀಲನಾ ಸಮಿತಿಯು ಪರಿಶೀಲಿಸುತ್ತಿದೆ.

5) ಸಿಂಧಗಿ ತಾಲ್ಲೂಕಿನ ಕುಮಸಿ ಗ್ರಾಮದ ಸೇವಾ ಸಹಕಾರಿ ಸಂಘದಲ್ಲಿ ಕಾರ್ಯದರ್ಶಿಯವರಿಂದ ಅವ್ಯವಹಾರ.

ಶ್ರೀ ಆರ್. ಬಿ. ಚೌಧರಿ (ಸಿಂಧಗಿ):- ಮಾನ್ಯ ಉಪಾಧ್ಯಕ್ಷೀಣಿಯವರೇ, ಸಿಂಧಗಿ ತಾಲ್ಲೂಕಿನ ಕುಮಸಿ ಗ್ರಾಮದ ಸೇವಾ ಸಹಕಾರಿ ಸಂಘಕ್ಕೆ ಚುನಾವಣೆ ನಿಯಮದ ಪ್ರಕಾರ 27.2.90 ರಂದು ಜರುಗಿದ ಸರ್ವಸದಸ್ಯರ ಮಹಾಸಭೆಯಲ್ಲಿ ಆಡಳಿತ ಮಂಡಳಿ ಚುನಾಯಿತವಾಯಿತು. ಆದರ ಕಾರ್ಯದರ್ಶಿ ಶ್ರೀ ಬಿರಾದಾರ ಇವರು ಹಾಜರಾಗದೇ ಆಡಳಿತ ಸದಸ್ಯರುಗಳ ಸಭೆ ಜರುಗಿತು. ಶ್ರೀ ಬಿರಾದಾರ್ ಹಾಗೂ ಚೇರಮನ್ ಶ್ರೀ ಎಸ್.ಎಸ್. ಪಾಟೀಲ್ ಇಬ್ಬರೂ ಶಾಮೀಲಾಗಿ 90,000-00 ರೂ. ಹಣ ದುರುಪಯೋಗವಲ್ಲದೇ ಇನ್ನಿತರ ಅವ್ಯವಹಾರ ಕೂಡ ಮಾಡಿದ್ದಾರೆ. ಆದ್ದರಿಂದ ಕಾರ್ಯದರ್ಶಿಯು ಇದನ್ನು ಮುಚ್ಚಿಕೊಳ್ಳಲು ಚುನಾವಣೆ ನಡೆಯಲ್ಲವೆಂದು ಪೊಟ್ಟಿ ವರದಿ ಮಾಡಿ ಕರ್ನಾಟಕ ಸಹಕಾರಿ ಸಂಘಗಳ ನಿಯಮ 18ಎ8ರ ಪ್ರಕಾರ ಅಪರಾಧಿಯಾಗಿದ್ದಾನೆ. ಇವನನ್ನು 15 ದಿವಸದೊಳಗೆ ಚೇರಮನ್‌ರ ಅಯ್ಕೆಗಾಗಿ ಸಭೆ ಕರೆಯುವಂತೆ ಕರ್ನಾಟಕ ಸಹಕಾರಿ ಸಂಘಗಳ 190() ನಿಯಮ